| | | | |
|---|---|---|---|
| <?xml version="1.0" ?> | | | |
| <?xml-stylesheet type="text/css" href="home.css"?> | | | |
| <Doc id="kan-w-media- | K-1644a | " | lang="kannada"> |
| <Header type="text"> | | | |
| <encodingDesc> | | | |
| <projectDesc> | CIIL-Kannada Corpora, Monolingual Written Text | | </projectDesc> |
| <samplingDesc> | Simple written text only has been transcribed. Diagrams, pictures and tables have been omitted. Samples taken from page 4,5 | | </samplingDesc> |
| </encodingDesc> | | | |
| <sourceDesc><br><biblStruct><br><source> | | | |
| | <category> | Aesthetics | </category> |
| | <subcategory> | Literature-Essays | </subcategory> |
| | <text> | Book | </text> |
| | <title> | graama mattu sishTa devategaLu | </title> |
| | <vol> | | </vol> |
| | <issue> | | </issue> |
| </source> | | | |
| <textDes> | | | |
| | <type> | | </type> |
| | <headline> | adhyayanada uddesha mattu vyaapti | </headline> |
| | <author> | S. Lakshmideve. | </author> |
| | <words> | 270 | </words> |
| </textDes> | | | |
| <imprint> | | | |
| | <pubPlace> | India- Kuppam | </pubPlace> |
| | <publisher> | Citkala Prakashana | </publisher> |
| | <pubDate> | 2007 | </pubDate> |
| </imprint> | | | |
| <idno type="CIIL code"> | | G.I.A - 28 | </idno> |
| <index> | | K-1642a | </index> |
| </biblStruct><br></sourceDesc> | | | |
| <profileDesc><br><creation> | | | |
| | <date> | 10-Sep-2008 | </date> |
| | <inputter> | Shobha J | </inputter> |
| | <proof> | | </proof> |
| </creation> | | | |
| <langUsage> | | Kannada | </langUsage> |
| <wsdUsage> | | | |
| <writingSystem id="ISO/IEC 10646">Universal Multiple-Octet Coded Character Set (UCS).<br></writingSystem> | | | |
| </wsdUsage> | | | |
| <textClass> | | | |
| <channel mode="w"> | | print | </channel> |
| <domain type="public"> | | | </domain> |
| </textClass><br></profileDesc><br></Header> | | | |
| <text><body> | | | |

| | | |
|---|---|---|
| <p> | 1942ರಲ್ಲಿ ವಿ. ಆರ್. ರಾಮಚಂದ್ರ ದೀಕ್ಷಿತಾರ್ ರವರು 'ಲಲಿತ ಕಲ್ಟ್' ಎಂಬ ಕೃತಿಯಲ್ಲಿ ಶಾಕ್ತಪಂಥ ಬೆಳೆದು ಬಂದ ಬಗೆಯನ್ನು ವಿವರಿಸಿದ್ದಾರೆ. ಶ್ರೀಲಲಿತೆಯ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುತ್ತಾ ದೇವಿಯ ಶ್ರೀ ಚಕ್ರದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಅಲ್ಲದೆ ಶಕ್ತಿಪಂಥ ಹಾಗೂ ತಂತ್ರ ಪರಂಪರೆಯ ಬಗ್ಗೆ ತಾತ್ವಿಕ ಚಿಂತನೆಯನ್ನು ನಡೆಸಿದ್ದಾರೆ. | </p> |
| <p> | 1977ರಲ್ಲಿ ನರೇಂದ್ರನಾಥ್ ಭಟ್ಟಚಾರ್ಯರವರು ರಚಿಸಿದ 'ಇಂಡಿಯನ್ ಮದರ್ ಗಾಡೆಸ್' ಸಂಪುಟ-1ರಲ್ಲಿ ಮಾತೃದೇವತೆಗಳ ಹುಟ್ಟು ಬೆಳವಣಿಗೆಗಳ ಅಧ್ಯಯನಕ್ಕೆ ಆಯಾ ಸಮಾಜದ ಆರ್ಥಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳು ಉಪಯುಕ್ತವಾಗಿವೆ ಎಂಬುದನ್ನು ಚರ್ಚಿಸಲಾಗಿದೆ. | </p> |
| <p> | 1977ರಲ್ಲಿ ಇದೇ ಲೇಖಕರು ರಚಿಸಿದ 'ಇಂಡಿಯನ್ ಮದರ್ ಗಾಡೆಸ್', ಸಂಪುಟ-02ರಲ್ಲಿ ಮಾತೃದೇವತೆಗಳ ಹುಟ್ಟು, ಆಕೆಯ ಆಚರಣೆಗಳು, ಫಲವಂತಿಕೆಯ ಸ್ವರೂಪವಾದ ಮಾತೃದೇವತೆಯ ಪುರಾಣ ಹಾಗೂ ಸಮಾಜದಲ್ಲಿ ಸ್ತ್ರೀ ದೇವತೆಗಳ ಪ್ರಾಬಲ್ಯಗಳ ಬಗ್ಗೆ ಸವಿಸ್ತಾರವಾದ ವಿವರಣೆಯನ್ನು ನೀಡಲಾಗಿದೆ. ಈ ಎರಡೂ ಸಂಪುಟಗಳು ಮಾತೃದೇವತೆಯನ್ನು ಕುರಿತು ರಚಿತವಾಗಿದ್ದರೂ ಗ್ರಾಮದೇವತೆಗಳನ್ನು ಕುರಿತ ಚರ್ಚೆ ಇಲ್ಲಿ ವ್ಯಾಪಕವಾಗಿದೆ. ಪುರಾಣಗಳಲ್ಲಿರುವ ದೇವಿಯ ಅಸ್ತಿತ್ವದ ಬಗ್ಗೆ ಹಾಗೂ ಪ್ರಾಮಿ, ಪಕ್ಷಿ, ನದಿ, ಬೆಟ್ಟ, ಗುಡ್ಡಗಳಲ್ಲಿ ದೇವಿಯ ಸ್ವರೂಪ ಇರುವ ಬಗ್ಗೆ ಈ ಕೃತಿಯಲ್ಲಿ ಚರ್ಚೆ ನಡೆಸಲಾಗಿದೆ. ಅಲ್ಲದೆ ಭೂಗರ್ಭಶಾಸ್ತ್ರದಲ್ಲಿ ಉತ್ಖನನದ ಸಂದರ್ಭದಲ್ಲಿ ದೊರೆತ ದೇವಿಯ ಕೆಲವು ವಿಗ್ರಹಗಳ ವಿವರಗಳನ್ನು, ಧರ್ಮದಲ್ಲಿ ದೇವಿಯ ಕಲ್ಪನೆಯನ್ನು, ಸ್ತ್ರೀವಾದಿ ಸಮಾಜದಲ್ಲಿ ದೇವಿಯರ ಅಸ್ತಿತ್ವವನ್ನು ಕುರಿತು ಮಾಹಿತಿಯನ್ನು ನೀಡಲಾಗಿದೆ. | </p> |
| <p> | 1978ರಲ್ಲಿ ಮಹೇಶ್ ಚಂದ್ರಪ್ರಸಾದ್ ಶ್ರೀವಾಸ್ತವ್ ರವರು 'ಮದರ್ ಗಾಡೆಸ್ ಇನ್ ಇಂಡಿಯನ್ ಆರ್ಟ್ ಆರ್ಕಿಯಾಲಜಿ ಅಂಡ್ ಲಿಟರೇಟರ್' ಎಂಬ ಕೃತಿಯನ್ನು ರಚಿಸಿದ್ದು, ವೈದಿಕ ಪೂರ್ವ, ವೈದಿಕ, ವೈದಿಕೊತ್ತರ, ಮೌರ್ಯ, ಗುಪ್ತರ ಕಾಲದಲ್ಲಿಯ ಮಾತೃದೇವತೆಯ ಸ್ವರೂಪ, ಹಬ್ಬ ಹಾಗೂ ಆಚರಣೆಗಳನ್ನು ಗುರುತಿಸಿದ್ದಾರೆ. ಆಚರಣೆಗಳಲ್ಲಿ ಸರಸ್ವತಿ, ದುರ್ಗೆ, ಕಾಳಿ, ಲಕ್ಷ್ಮಿಯರನ್ನೊಳಗೊಂಡಂತೆ ಶಕ್ತಿದೇವತೆಗಳ ವಿವರಗಳು ಇವೆ. ಕುಮಾರಿ ಪೂಜೆಯ ಬಗ್ಗೆಯೂ ವಿವರಗಳಿವೆ. ಇದೇ ವರ್ಷದಲ್ಲಿ ಪ್ರಕಟವಾದ ಡಾ. ಪೃಥ್ವಿಕುಮಾರ್ ಅಗರ್ ವಾಲ್ ರವರ 'ಗಾಡೆಸ್ ವಿನಾಯಕಿ, ದಿ ಫೀಮೇಲ್ ಗಣೇಶ' ಎಂಬ ಕೃತಿಯಲ್ಲಿ ಮಥುರಾ, ರಾಜಸ್ಥಾನ, ಅಲಹಾಬಾದ್, ಗ್ವಾಲಿಯರ್, ಬಿಹಾರ್, ಒರಿಸ್ಸಾ, ಜಬ್ಬಲ್ ಪುರ್, ಮಧ್ಯಪ್ರದೇಶ್, ಕಲ್ಕತ್ತ ಹಾಗೂ ದೆಹಲಿ ಮುಂತಾದ ಪ್ರದೇಶಗಳಲ್ಲಿ ಕಂಡು ಬಂದಿರುವ ಆನೆ ಮುಖವುಳ್ಳ ವಿನಾಯಕಿಯ ವಿಗ್ರಹಗಳ ಬಗ್ಗೆ ಹಾಗೂ ಅದರ ಪುರಾತತ್ವ ನೆಲೆಯ ಮತ್ತು ಸಾಹಿತ್ಯದ ಬಗ್ಗೆ ವಿವರಣೆಯನ್ನು ಒಳಗೊಂಡಿದೆ. ಭಾರತೀಯ ಕಲೆಯಲ್ಲಿ ವಿನಾಯಕಿ ಮತ್ತು ಆಕೆಯ ಶಕ್ತಿಯ ಬಗ್ಗೆ ಇರುವ ವಿವರಗಳನ್ನು ಸಮೀಕ್ಷಿಸಲಾಗಿದೆ. | </p> |
| <p> | 1980ರಲ್ಲಿ ಶ್ಯಾಮಕಿಶೋರಿಲಾಲರು ರಚಿಸಿದ 'ಫಿಮೇಲ್ ಡಿವಿನಿಟೀಸ್ ಇನ್ ಹಿಂದೂ ಮೈಥಾಲಜಿ ಅಂಡ್ ರಿಚುಯಲ್' ಎಂಬ ಕೃತಿಯಲ್ಲಿ ಸ್ತ್ರೀದೇವತೆಗಳ ಸ್ವರೂಪದೊಂದಿಗೆ, ಪ್ರಮುಖವಾದ ಅದಿತಿಯನ್ನೊಳಗೊಂಡಂತೆ, ಅಸುನಿತಿ, ಅಕುಟಿ, ಇದಿ, ಗಾಯತ್ರಿ, ಸಾವಿತ್ರಿ, ಶಾರದ, ಸರಸ್ವತಿ ಮುಂತಾದ ದೇವತೆಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ವೇದ ಹಾಗೂ ಪುರಾಣ ಕಾಲದಲ್ಲಿ ಇವರಿಗೆ ಇದ್ದ ಮಹತ್ವದ ಬಗ್ಗೆ ಚರ್ಚಿಸುವುದರೊಂದಿಗೆ, ಸಂಸ್ಕೃತ ಸಾಹಿತ್ಯದಲ್ಲಿ ಕಂಡುಬರುವ ಇವರ ಆಚರಣೆಗಳ ಬಗ್ಗೆ ಚರ್ಚಿಸಲಾಗಿದೆ. | </p> |

</body></text>
</Doc>